# ಶಿಕ್ಷಕರೇ ಗಮನಿಸಿ



**ಪ್ರಿಯ ಶಿಕ್ಷಕರೇ, ಪರೀಕ್ಷೆಗಳ ಸಮಯ ಸಮೀಪಿಸುತ್ತಿದೆ. ಹೀಗಾಗಿ ನಿಮ್ಮ ಜವಾಬ್ದಾರಿಯೂ ಅಧಿಕ. ಈ ಸಂದರ್ಭದಲ್ಲಿ ಕೆಳಗಿನ ಕೆಲವು ಸಲಹೆ–ಸೂಚನೆಗಳು ನಿಮಗೆ ಸಹಾಯಕವಾಗಬಲ್ಲವು:**

1 ಚೆನ್ನಾಗಿ ಓದುವುದರ ಆವಶ್ಯಕತೆಯನ್ನು ಮಕ್ಕಳಿಗೆ ಮನಗಾಣಿಸುವುದು ನಿಮ್ಮ ಕರ್ತವ್ಯ. ಆದರೆ ಪರೀಕ್ಷೆಯ ಭಯ ಹುಟ್ಟಿಸುವುದು ಒಳ್ಳೆಯದಲ್ಲ. ಅದರಿಂದ ವಿಪರೀತ ಪರಿಣಾಮ ಉಂಟಾಗಬಹುದು.

2 ಮಕ್ಕಳು ತಾವೀಗಾಗಲೇ ಓದಿರುವ ಪಠ್ಯಭಾಗದ ವಿಷಯದಲ್ಲಿ, ಹೆಚ್ಚು ಪರಿಣತಿಯನ್ನೂ ಆತ್ಮವಿಶ್ವಾಸವನ್ನೂ ಬೆಳೆಸಿಕೊಳ್ಳುವಂತೆ ಅವರಿಗೆ ಉತ್ತೇಜನ ನೀಡಿ. ಸಾಧ್ಯವಾದಷ್ಟೂ ಆತ್ಮವಿಶ್ವಾಸ, ಧೈರ್ಯ ಹುಟ್ಟಿಸುವ ಮಾತುಗಳನ್ನೇ ತರಗತಿಯಲ್ಲಿ ಆಡಿರಿ. ಅದಕ್ಕಾಗಿ ಸ್ವಾಮಿ ವಿವೇಕಾನಂದರ ಪ್ರಸಿದ್ಧ ವಾಕ್ಯಗಳನ್ನು ನೀವು ಉಪಯೋಗಿಸಿಕೊಳ್ಳಬಹುದು.

3 ನಾವು ಸರಿಯಾದ ಮಾರ್ಗದರ್ಶನ ಮತ್ತು ಪ್ರೋತ್ಸಾಹ ನೀಡಿದರೆ, ಅಧ್ಯಯನದಲ್ಲಿ ದುರ್ಬಲರಾಗಿರುವ ಮಕ್ಕಳು ಕೂಡ ಪರೀಕ್ಷೆಯಲ್ಲಿ ಸಮರ್ಥವಾಗಿ ಬರೆಯಬಲ್ಲರು. ಅದಕ್ಕಾಗಿ ಅವರ ಮೇಲೆ ಹೆಚ್ಚು ಗಮನಕೊಟ್ಟು, ಅವರಿಗೆ ಶೈಕ್ಷಣಿಕ ಮಾರ್ಗದರ್ಶನವನ್ನು ನೀಡುವುದರ ಜೊತೆಗೆ, ಆತ್ಮವಿಶ್ವಾಸ ಮತ್ತು ಧೈರ್ಯಗಳನ್ನು ತುಂಬುವುದಕ್ಕೆ ಪ್ರಯತ್ನಿಸಿ. ಅಂತಹ ಮಕ್ಕಳು ಅಸಹಾಯಕ ಭಾವನೆಯನ್ನು ಬೆಳೆಸಿಕೊಳ್ಳದಂತೆ, ಅವರಿಗೆ ಭಾವನಾತ್ಮಕ ರಕ್ಷಣೆಯನ್ನು ಒದಗಿಸಿರಿ.

4 ಸಾಧ್ಯವಾದಷ್ಟೂ ಕಠಿಣ ಪಠ್ಯಭಾಗಗಳನ್ನು ಹೆಚ್ಚು ಹೆಚ್ಚು ಪುನರಾವರ್ತನೆ ಮಾಡಿಸಿರಿ. ಅದು ಸುಲಭವೆಂಬಂತೆ ಮಕ್ಕಳ ಮನಸ್ಸಿನಲ್ಲಿ ಭಾವನೆ ಮೂಡಿಸಲು ಪ್ರಯತ್ನಿಸಿ. ಮತ್ತೆ ಮತ್ತೆ ಮಾಡುವ ಅಭ್ಯಾಸದಿಂದ ಮಕ್ಕಳು ಕಠಿಣವಾದ ಪಠ್ಯಭಾಗವನ್ನೂ ಅರಿತುಕೊಳ್ಳಬಲ್ಲರು.

5 ಪರೀಕ್ಷೆಯ ಸಂದರ್ಭದಲ್ಲಿ ಮಕ್ಕಳು ತಮ್ಮ ಆರೋಗ್ಯದ ಕಡೆಗೆ ಹೆಚ್ಚು ಗಮನವಿಡಬೇಕು. ಆ ಬಗ್ಗೆ ನಿಮ್ಮ ಮಾರ್ಗದರ್ಶನ ಅವರಿಗೆ ಅತ್ಯವಶ್ಯಕ.

6 ನಿಮ್ಮ ಕೆಲಸದ ಭಾರ ಮತ್ತು ಒತ್ತಡಗಳನ್ನು ಮಕ್ಕಳ ಮೇಲೆ ರವಾನಿಸಲು ಹೋಗಬೇಡಿ. ಎಷ್ಟೇ ಬಾಹ್ಯ ಒತ್ತಡವಿದ್ದರೂ, ಮಕ್ಕಳ ಮುಂದೆ ನಗುಮುಖದಿಂದ ಇದ್ದು, ಸಕಾರಾತ್ಮಕವಾಗಿಯೇ ವರ್ತಿಸಿ.

7 ಪುನರಾವರ್ತನೆಯು ಯಾಂತ್ರಿಕವಾಗಬಾರದು. ಅದು ಕೂಡ ಕಲಿಕೆಯ ಒಂದು ಅಂಗವಾದ್ದರಿಂದ, ಅಲ್ಲೂ ಸಂತೋಷದ ವಾತಾವರಣ ನಿರ್ಮಿಸಬೇಕು. ಚರ್ಚಾಗೋಷ್ಠಿ, ರಸಪ್ರಶ್ನೆ, ಪದಬಂಧ – ಮುಂತಾದ ಸ್ಪರ್ಧೆಗಳು ಮತ್ತು ಆಟಗಳ ರೂಪದಲ್ಲಿ ಪುನರಾವರ್ತನೆ ಮಾಡಿಸಿದರೆ, ಮಕ್ಕಳಿಗೆ ಅದು ಮನರಂಜನೆಯೂ ಆಗುತ್ತದೆಯಲ್ಲದೆ, ವಿಷಯವೂ ಚೆನ್ನಾಗಿ ಮನದಟ್ಟಾಗುತ್ತದೆ.

8 ಬಹಳ ಮಕ್ಕಳು ಹೆಚ್ಚು ಓದುತ್ತಾರೆ, ಆದರೆ ಮತ್ತೆ ಮತ್ತೆ ಬರೆದು ಅಭ್ಯಾಸ ಮಾಡುವುದಿಲ್ಲ. ಹೀಗಾಗಿ ಅವರಿಗೆ ಮತ್ತೆ ಮತ್ತೆ ಬರೆಯುವ ಅವಕಾಶಗಳನ್ನು ಕಲ್ಪಿಸಿಕೊಡಿ. ಸ್ವಂತ ವಾಕ್ಯಗಳಲ್ಲಿ ಬರೆಯುವ ಆವಶ್ಯಕತೆಯನ್ನು ಮನಗಾಣಿಸಿ.

9 ಮಕ್ಕಳಿಗೆ ಈಗಾಗಲೇ ಇರುವ ಮಾನಸಿಕ ಮತ್ತು ಭಾವನಾತ್ಮಕ ಭಾರವನ್ನು ಶಿಕ್ಷಕರಾದ ನಾವು ಇನ್ನೂ ಹೆಚ್ಚಿಸಲು ಹೋಗಬಾರದು. ಅದನ್ನು ಕಡಮೆ ಮಾಡಿಕೊಡುವುದು ಹೇಗೆ ಎನ್ನುವುದೇ ನಮ್ಮ ಲಕ್ಷ್ಯವಾಗಬೇಕು. ಹೀಗಾಗಿ ಪರೀಕ್ಷೆಯ ಮಹತ್ವವನ್ನು ಅವಶ್ಯಕ್ಕಿಂತ ಹೆಚ್ಚು ದೊಡ್ಡದು ಮಾಡಿ, ಮಕ್ಕಳಿಗೆ ಹೇಳುವುದು ಬೇಡ.

10 ಪರೀಕ್ಷೆ ಹತ್ತಿರ ಬಂದಂತೆಲ್ಲ ನೀವು ಪ್ರೇರಣಾಕರ್ತನ, ಸ್ಫೂರ್ತಿದಾಯಕನ, ಉತ್ಸಾಹದಾತನ ಕೆಲಸ ಮಾಡಬೇಕಾಗುತ್ತದೆ. ಮಕ್ಕಳ ಮನಸ್ಸು ಯಾವಾಗಲೂ ಪ್ರಫುಲ್ಲಿತವಾಗಿರುವಂತೆ ನೋಡಿಕೊಳ್ಳಬೇಕಾಗುತ್ತದೆ. ಇದರಿಂದ ಮಕ್ಕಳಿಗೂ ಶ್ರೇಯಸ್ಸು; ನಮಗೂ ಶ್ರೇಯಸ್ಸು. **ನೆನಪಿರಲಿ, ಮಕ್ಕಳ ಶ್ರೇಯೋಭಿವೃದ್ಧಿಯೇ ನಮ್ಮ ವೃತ್ತಿಯ ಏಕಮಾತ್ರ ಲಕ್ಷ್ಯವಾಗಬೇಕು. ಅದಕ್ಕಾಗಿ ಪ್ರಾಮಾಣಿಕತೆಯಿಂದ ಪ್ರಯತ್ನ ಮಾಡುವುದರಲ್ಲಿಯೇ ಶಿಕ್ಷಕ ವೃತ್ತಿಯ ಸಾರ್ಥಕತೆ ಅಡಗಿದೆ.**

# ಛಾಯಾಚಿತ್ರಗಳಲ್ಲಿ ಸ್ವಾಮಿ ವಿವೇಕಾನಂದರು


ಕೆ.ಆರ್. ಮೋಹನ್



### ಛಾಯಾಚಿತ್ರ – ೫೪

ಸ್ವಾಮಿ ವಿವೇಕಾನಂದರು ಪಶ್ಚಿಮ ದೇಶಗಳ ತಮ್ಮ ವಿಜಯೋತ್ಸವವನ್ನು ಮುಗಿಸಿ, ೧೮೯೭ ರ ಜನವರಿ ೧೫ ನೇ ತಾರೀಖು ಕೊಲೊಂಬೋ ತಲುಪಿದರು. ದಿನಾಂಕ ೧೬ ರಂದು ಅವರು ಕೊಲೊಂಬೋದ ಫ್ಲೋರಲ್ ಹಾಲ್ ಎಂಬಲ್ಲಿ ಹಾಗೂ ದಿನಾಂಕ ೧೭ ರಂದು ಪಬ್ಲಿಕ್ ಹಾಲ್ ಎಂಬಲ್ಲಿ ಭಾಷಣಗಳನ್ನು ಮಾಡಿದರು. ಅವರ ಪ್ರವಚನಗಳನ್ನು ಕೇಳಲು ಸಹಸ್ರಾರು ಜನ ಕಿಕ್ಕಿರಿದು ನೆರೆದಿದ್ದರು. ಎರಡೂ ಕಡೆಗಳಲ್ಲಿ ಸ್ವಾಮೀಜಿ ಬಹಳ ಭಾವಪ್ರಚೋದಕ ಭಾಷಣಗಳನ್ನು ಮಾಡಿದರು.

ಈ ಚಿತ್ರವನ್ನು ಕೊಲೊಂಬೋದಲ್ಲಿ ಸೆರೆಹಿಡಿಯಲಾಯಿತು. ಇದರ ಬಗ್ಗೆ ಕೊಲೊಂಬೋ ರಾಮಕೃಷ್ಣ ಮಿಷನ್ನಿನ ಭಕ್ತೆಯಾದ ಶ್ರೀಮತಿ ಪೂಮಣಿ ಗುಣಸಿಂಘಮ್ ಅವರು ಸಾಕಷ್ಟು ಸಂಶೋಧನೆ ನಡೆಸಿದ್ದಾರೆ. ಅವರು ಕೊಲೊಂಬೋ ವಿಶ್ವವಿದ್ಯಾನಿಲಯದಲ್ಲಿ ಉಪನ್ಯಾಸಕರಾಗಿದ್ದರು. ಈ ಚಿತ್ರ



ಚಿತ್ರ : ೫೪

ಹಾಗೂ ಸಂಖ್ಯೆ ೫೬ ಮತ್ತು ೫೭ – ಈ ಚಿತ್ರಗಳನ್ನು ಸ್ವಾಮೀಜಿ ಭಾಷಣ ಮಾಡಿದ ಫ್ಲೋರಲ್ ಹಾಲ್ ಅಥವಾ ಪಬ್ಲಿಕ್ ಹಾಲ್‌ನಲ್ಲಿ ತೆಗೆದಿರಬೇಕೆಂದು ಅವರು ನಿಶ್ಚಯಕ್ಕೆ ಬಂದಿದ್ದಾರೆ. ಆದರೆ ಇದು ನಿಖರವಾದ ಮಾಹಿತಿಯೇನಲ್ಲ. ಬಹಶಃ ಈ ಚಿತ್ರವನ್ನು ಸ್ಟುಡಿಯೋದಲ್ಲಿ ತೆಗೆದಿರಬೇಕೆಂದು ಭಾವಿಸಲಾಗಿದೆ.

### ಛಾಯಾಚಿತ್ರ – ೫೫



ಚಿತ್ರ : ೫೫

ಇದು ಚಿತ್ರ ೫೪ ರ ಮೇಲ್ಭಾಗವಷ್ಟೇ. ಆದರೆ ಸ್ವಾಮೀಜಿಯವರ ಮುಖ ಇಲ್ಲಿ ಚೆನ್ನಾಗಿ ಮೂಡಿಬಂದಿದೆ.

### ಛಾಯಾಚಿತ್ರ – ೫೬

೧೮೯೭ ರ ಜನವರಿ ೧೭ ರಂದು ಸ್ವಾಮೀಜಿ ಕೊಲೊಂಬೋದಲ್ಲಿ ತಮಿಳು ಜನರು ವಾಸಿಸುವ ಪ್ರದೇಶದಲ್ಲಿರುವ ಒಂದು ದೇವಸ್ಥಾನಕ್ಕೆ ಭೇಟಿಕೊಟ್ಟಿದ್ದರು. ಅಲ್ಲಿ ಅವರಿಗೆ ಸಾರ್ವಜನಿಕ ಸನ್ಮಾನ ಏರ್ಪಾಡಾಗಿತ್ತು. ಆಗ ಈ ಚಿತ್ರವನ್ನು ತೆಗೆಯಲಾಯಿತು. ಈ ವಿಷಯವನ್ನು ಸ್ವಾಮೀಜಿಯವರ ಶಿಷ್ಯರಾದ ಗುಡ್‌ವಿನ್ ಒಂದು ಪತ್ರದಲ್ಲಿ ಬರೆದಿದ್ದಾರೆ. ಈ ಚಿತ್ರದಲ್ಲಿ ಸ್ವಾಮೀಜಿ ಸರಳ ಉಡುಪಿನಲ್ಲಿ ಕಂಗೊಳಿಸುತ್ತಿದ್ದಾರೆ.

### ಛಾಯಾಚಿತ್ರ ೫೭

ಸ್ವಾಮೀಜಿ ಕೊಲೊಂಬೋದಲ್ಲಿ ಇದ್ದಾಗ, ಅವರು ಇಳಿದುಕೊಂಡಿದ್ದ ಬಂಗಲೆಗೆ ಅವರನ್ನು ನೋಡಲು ಜನ ಗುಂಪುಗುಂಪಾಗಿ ಬರುತ್ತಿದ್ದರು. ನಿಜವಾಗಿಯೂ